ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಸಧ್ಯದಲ್ಲಿಯೇ

ಇ) ಹೌದು.

ಈ) ದಾವಣಗೆರೆ ಬಸ್‌ನಿಲ್ದಾಣದಲ್ಲಿ ಉಪಹಾರ ಗೃಹ ನಡೆಸುವುದಕ್ಕೆ ಒಬ್ಬ ಪರವಾನಿಗೆದಾರರನ್ನು ದಿನಾಂಕ 6-2-1991 ರಂದು ಆಯ್ಕೆ ಮಾಡಲಾಗಿದೆ. ಈ ಉಪಹಾರ ಗೃಹವನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದು.

ಪ್ರಾಥಮಿಕ ಶಾಲೆಗಳಲ್ಲಿನ ಜವಾನರ ಬಗ್ಗೆ

1646 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿನ ಜವಾನರಿಗೆ ಬಹುಕಾಲದಿಂದ ಪ್ರತಿತಿಂಗಳು ಮೂರು ರೂಪಾಯಿ ಐವತ್ತು ಪೈಸೆ ಅಥವಾ ನಾಲ್ಕು ರೂಪಾಯಿ ಪಗಾರ ಕೊಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಒಂದು ವೇಳೆ ಸರ್ಕಾರದ ಗಮನಕ್ಕೆ ಬಂದರೆ, ಇವರಿಗೆ ಬೇರೆ ಸಿಬ್ಬಂದಿಗಳಂತೆ ವೇತನ ಶ್ರೇಣಿ ಕೊಟ್ಟಿಲ್ಲವೇಕೆ?

ಇ) ಇದು ನಿಜವಿದ್ದರೆ ಇವರಿಗೆ ಈಗಲಾದರೂ ಸಹ ಮೊದಲಿನಿಂದಲೂ ಸರ್ಕಾರ ಬೇರೆಯವರಂತೆ ಇವರಿಗೂ ಸಹ ವೇತನ ಶ್ರೇಣಿ ನಿಗಧಿಗೊಳಿಸುವುದೆ?

ಈ) ಹಾಗಿದ್ದಲ್ಲಿ ಯಾವಾಗ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) :

ಅ) ಹೌದು. ಒಟ್ಟು 9 ಜನ ಕಸ ಗುಡಿಸುವವರಿಗೆ ಸಾದಿಲ್ವಾರು ವೆಚ್ಚದಿಂದ ಹಣಪಾವತಿ ಮಾಡಲಾಗುತ್ತಿದೆ.

ಆ) ಸಾದಿಲ್ವಾರು ವೆಚ್ಚದಿಂದ ಪಾವತಿ ಮಾಡುತ್ತಿರುವವರಿಗೆ ವೇತನ ಶ್ರೇಣಿ ಅನ್ವಯಿಸುವುದಿಲ್ಲ. ಅಲ್ಲದೆ ಇವರು ಪೂರ್ಣಾವಧಿ ನೌಕರರು ಅಲ್ಲ.

ಇ) ನಿಯಮಾನುಸಾರ ಅವಕಾಶವಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗವನ್ನು ತೆರೆಯುವುದು.

1672 - ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಯಲ್ಲಾಪುರ ಮತ್ತು ಮುಂಡಗೋಡದಲ್ಲಿರುವ ಪ್ರಥಮ ದರ್ಜೆ ಸರ್ಕಾರಿ ಪದವಿ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗವನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಇದ್ದಲ್ಲಿ ಮೇಲ್ಕಂಡ ಕಾಲೇಜುಗಳಲ್ಲಿ ಶೈಕ್ಷಣಿಕ ವರ್ಷದಲ್ಲಿ ವಿಜ್ಞಾನ ವಿಭಾಗವನ್ನು ತೆರೆಯಲು ಸರ್ಕಾರ ಕ್ರಮ ಕೈಗೊಳ್ಳಲಾಗುತ್ತಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಹೌದು.

ಆ) ಈ ವಿಷಯವು ಪರಿಶೀಲನೆಯಲ್ಲಿದೆ.